# ಪ್ರಹಸನ ಪ್ರಸಂಗ

ಪತಿಪತ್ನಿಯರಿಬ್ಬರು ಸ್ಮಶಾಣದಿಂದ ಹಿಂದಿರುಗುತ್ತಿದ್ದರು. ಅವರು ಸೋದರಮಾವ ಶ್ಯಾಮನ ಸಂಸ್ಕಾರಕ್ಕೆ ಅಲ್ಲಿಗೆ ಹೋಗಿದ್ದರು. ಶ್ಯಾಮನು ಇಪ್ಪತ್ತು ವರ್ಷಗಳ ಕಾಲ ಅವರೊಡನಿದ್ದ.

ಪತಿ ಪತ್ನಿಯನ್ನು ಕುರಿತು ಹೇಳಿದ: "ನೋಡು, ಶ್ಯಾಮ ನಿನ್ನ ಸೋದರ ಮಾವನಾಗಿದ್ದುದರಿಂದ ಇಷ್ಟು ಕಾಲವೂ ಅವನನ್ನು ಸಹಿಸಿಕೊಂಡಿದ್ದೆ. ನಿನ್ನ ಮೇಲಿನ ಪ್ರೀತಿಯಿಂದಾಗಿ ಅವನ ಎಲ್ಲ ಕಿರುಕುಳಗಳನ್ನೂ ಸಹಿಸಿಕೊಂಡಿರಬೇಕಾಯಿತು."

ಪತ್ನಿ ಪರಮಾಶ್ಚರ್ಯದಿಂದ ನುಡಿದಳು: "ಅಯ್ಯೋ, ಎಂಥ ಅನ್ಯಾಯವಾಯಿತು! ನಾನು ಇದುವರೆಗೂ ಅವನು ನಿಮ್ಮ ಸೋದರ ಮಾವ ಎಂದುಕೊಂಡಿದ್ದೆ!

**ಹೀಗೆಯೇ ಅನೇಕ ಆಸೆಗಳು ಕರ್ತವ್ಯದ ಮುಸುಕಿನಲ್ಲಿ ಮನದಲ್ಲಿ ಮನೆ ಮಾಡಿಕೊಂಡಿರುತ್ತವೆ. ಅವುಗಳಿಂದ ಎಷ್ಟೇ ತೊಂದರೆಯಾಗುತ್ತಿದ್ದರೂ ಅವುಗಳನ್ನು ಬಿಡಲು ಆಗುವುದಿಲ್ಲ.**

❀ ❀ ❀ ❀

ಮುಲ್ಲಾ ಗೋವಿಯಾಜಾ ತುಂಬ ಹಾಸ್ಯಪ್ರವೃತ್ತಿಯವನು. ಅವನ ನೆರೆಯವನು ತುಂಬ ಜಗಳಗಂಟ. ಅವನ ಹತ್ತಿರ ಒಂದು ಕೆಟ್ಟ ನಾಯಿ ಇತ್ತು. ಅದು ಕೆಲವು ವೇಳೆ ಸುಮ್ಮಸುಮ್ಮನೆ ಕೂಗುತ್ತಿತ್ತು. ಅದು ಮಧ್ಯರಾತ್ರಿಯೇ ಹೆಚ್ಚಾಗಿ ಬೊಗಳುವುದು. ಮುಲ್ಲಾನ ನಿದ್ರೆಗೆ ಭಂಗವುಂಟಾಗುತ್ತಿತ್ತು.

ಒಂದು ದಿನ ಬಹಳ ಕೆಲಸದನಂತರ ಮುಲ್ಲಾ ರಾತ್ರಿ ತುಂಬ ಹೊತ್ತಾದಮೇಲೆ ಮನೆಗೆ ಹಿಂತಿರುಗಿದನು. ಅಂದು ಆತ ತುಂಬ ಬಳಲಿದ್ದನು. ಮನೆಗೆ ಬಂದವನೇ ಮಲಗಿ ನಿದ್ರಿಸಿದನು. ಮಧ್ಯರಾತ್ರಿಯ ಹೊತ್ತಿಗೆ ನೆರಮನೆಯ ನಾಯಿ ಬೊಗಳಲು ಪ್ರಾರಂಭಿಸಿತು. ಮುಲ್ಲಾನ ಸುಖ ನಿದ್ರೆಗೆ ಭಂಗವುಂಟಾಯಿತು.

ಮುಲ್ಲಾನ ಕೋಪ ನೆತ್ತಿಗೇರಿತು. ತನ್ನ ಊರುಗೋಲನ್ನು ತೆಗೆದುಕೊಂಡು ನೆರೆಮನೆಗೆ ಧಾವಿಸಿ ನಾಯಿಯನ್ನು ಸರಿಯಾಗಿ ಥಳಿಸಿದನು. ಈಗ ನಾಯಿ ಆಕಾಶ ಕಿತ್ತುಹೋಗುವಂತೆ ಕಿರುಚಲು ಪ್ರಾರಂಭಿಸಿತು. ನೆರೆಯವನಿಗೆ ಎಚ್ಚರವಾಯಿತು. ಹೊರಗೆ ಬಂದು ಮುಲ್ಲಾನನ್ನು ನೋಡಿದಾಗ ಆತ ಕಿಡಿಕಿಡಿಯಾದ.

"ಏಯ್ ಮುಲ್ಲ ನಿಲ್ಲಿಸು! ನನ್ನ ನಾಯಿಯನ್ನು ಹೊಡೆಯಲು ನಿನಗೆಷ್ಟು ಧೈರ್ಯ! ನೀನು ನನ್ನ ನಾಯಿಗೆ ಹೊಡೆದರೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ. ಜೋಕೆ!"

"ಏನು ಮಾಡುತ್ತೀಯೆ?" ಮುಲ್ಲ ಕೇಳಿದ.

"ನೀನು ನಾಯಿಯ ಬೆನ್ನಿಗೆ ಹೊಡೆದರೆ ನಿನ್ನ ಬೆನ್ನು ಮುರಿಯುತ್ತೇನೆ. ಅದರ ಕಾಲಿಗೆ ಹೊಡೆದರೆ ನಿನ್ನ ಕಾಲು ಮುರಿಯುತ್ತೇನೆ. ತಿಳಿಯಿತೆ?"

ಮುಲ್ಲ ಸ್ವಲ್ಪ ಹೊತ್ತು ಆಲೋಚಿಸಿ ಹೇಳಿದ: "ಹೌದು, ತಿಳಿಯಿತು. ಹಾಗಾದರೆ ಮುಂದೆ ನಾಯಿಯ ಬಾಲಕ್ಕೆ ಮಾತ್ರ ಹೊಡೆಯುತ್ತೇನೆ."(ಪಾಕಿಸ್ತಾನದ ಹಾಸ್ಯಪ್ರಸಂಗ)

**ನಾವು ಸತ್ಯವನ್ನು ಸಂಪೂರ್ಣ ಸ್ವೀಕರಿಸಬೇಕು. ನಮ್ಮ ಅನುಕೂಲಕ್ಕೆ ತಕ್ಕಂತೆ ಯಾವುದೋ ಒಂದು ಭಾಗವನ್ನು ಸ್ವೀಕರಿಸುವುದಲ್ಲ. ನಾಯಿಯ ಬಾಲಕ್ಕೆ ಹೊಡೆದರೂ ನಾಯಿಯನ್ನೇ ಹೊಡೆದಂತೆ. ಸುಖ-ದುಃಖ, ಪಾಪ-ಪುಣ್ಯಾದಿಗಳೆಲ್ಲವೂ ಸತ್ಯದ ವಿವಿಧ ಮುಖಗಳು. ಒಂದನ್ನು ಸ್ವೀಕರಿಸಿದರೆ ಎಲ್ಲವನ್ನೂ ಸ್ವೀಕರಿಸಬೇಕು.**

❀ ❀ ❀ ❀

ನಾವು ಸಾಮಾನ್ಯವಾಗಿ ಸುಖವನ್ನು ಅದಿಲ್ಲದ ವಸ್ತುವಿನಲ್ಲಿ ಅರಸುತ್ತೇವೆ. ಸುಖ ನಮ್ಮ ಅಂತರಂಗದಲ್ಲಿ ದೊರೆಯುವಂತಹುದು. ಆದರೆ ಅದನ್ನು ಬಾಹ್ಯ ವಸ್ತುಗಳಲ್ಲಿ, ಸನ್ನಿವೇಶಗಳಲ್ಲಿ ಅರಸುತ್ತೇವೆ.

ಒಮ್ಮೆ ಸರ್ದಾರ್ಜಿ ತಮ್ಮ ಒಬ್ಬ ಸ್ನೇಹಿತನೊಂದಿಗೆ ಗ್ರಾಮಾಂತರ ಪ್ರದೇಶದಲ್ಲಿ ಓಡಾಡುತ್ತಿದ್ದರು. ಸ್ನೇಹಿತನು ಇದ್ದಕ್ಕಿದ್ದಂತೆ "ನೋಡಲ್ಲಿ ಸತ್ತ ಪಕ್ಷಿಯನು!" ಎಂದು ಹೇಳಿದನು.

ಸರ್ದಾರ್ಜಿ ಆಕಾಶದ ಕಡೆ ನೋಡುತ್ತ "ಎಲ್ಲಿ, ಎಲ್ಲಿ" ಎಂದು ಕೇಳಿದರು.

❀ ❀ ❀ ❀

ನಾವು ಸಾಮಾನ್ಯವಾಗಿ ನಮ್ಮ ಮೂಗಿನ ನೇರಕ್ಕೆ ನೋಡುತ್ತೇವೆ. **ನಮ್ಮ ದೋಷಗಳನ್ನು ಇತರರ ಮೇಲೆ ಆರೋಪಿಸುತ್ತೇವೆ. ಇತರರರು ನಮಗಿಂತ ಉತ್ತಮರಾಗಿರಬಹುದು. ನಮಗಿಂತ ಉತ್ತಮ ಉದ್ದೇಶ ಅವರ ವರ್ತನೆಗಳ ಹಿಂದೆ ಇರಬಹುದು ಎಂದು ಭಾವಿಸುವುದು ಕಷ್ಟ.**

ಚಿಕ್ಕ ಬಾಲಕನು ಹೊಟ್ಟೆ ನೋವಿನಿಂದ ನರಳುತ್ತಿದ್ದನು. ವೈದ್ಯರನ್ನು ಕರೆಸಲಾಯಿತು. ಅವರು ಪರೀಕ್ಷಿಸಿ ನೋಡಿದರೆ ಏನೂ ದೋಷ ಕಂಡು ಬರಲಿಲ್ಲ. "ಆಹಾರ ಏನು ತೆಗೆದುಕೊಂಡೆ?" ಎಂದು ವಿಚಾರಿಸಿದರು. ಆ ಬಾಲಕ ಅಂದು ಏನೂ ತಿಂದಿರಲಿಲ್ಲ. "ಅದಕ್ಕಾಗಿಯೇ ಹೊಟ್ಟೆ ನೋಯುತ್ತಿದೆ" ಎಂದು ಹೇಳಿ ವೈದ್ಯರು ಹೊರಟುಹೋದರು.

ಅಂದೇ ರಾತ್ರಿ **ಬಾಲಕನ ತಂದೆಗೆ ತಲೆನೋವು** ಶುರುವಾಯಿತು. ಅದರ ಸಂಬಂಧವಾಗಿ **ಬಾಲಕ** ಹೇಳಿದ : "ತಲೆನೋವಿಗೆ ಕಾರಣ ನನಗೆ **ಗೊತ್ತು**. ತಲೆ ಖಾಲಿಯಾಗಿದೆ. ಅದಕ್ಕೇ ನೋವು!"